**ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಲಯ ಮಾಗಡಿ**

**ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 3515 / 2021**

**ಚಾಸಾ ಃ- 01 / ಪ್ರಾಸಾ ಃ- 01**

| | |
|---|---|
| ಹೆಸರು | ಶ್ರೀನಿವಾಸ್ |
| ತಂದೆ ಹೆಸರು | ಗೋವಿಂದಸ್ವಾಮಿ |
| ವಯಸ್ಸು | 26 |
| ಉದ್ಯೋಗ | ಅಕೌಂಟೆಂಟ್ |
| ವಿಳಾಸ | ಆರ್ ಆರ್ ನಗರ , ಬೆಂಗಳೂರು |

**ದಿನಾಂಕಃ 26.03.2026 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ಚಾಸಾ 2 ರಿಂದ 5 ಪರಿಚಯ ಇರುತ್ತಾರೆ. ಆರೋಪಿಯು ಪರಿಚಯ ಇರುತ್ತಾರೆ. 2020-2021 ರಲ್ಲಿ ನಾನು ಬಜಾಜ್ ಫೈನಾನ್ಸ್ ನಲ್ಲಿ ಕ್ಯಾಶ್ ಡಿಪಾರ್ಟ್ ಮೆಂಟ್ ನಲ್ಲಿ ಕೆಲಸ ಮಾಡುತ್ತಿದ್ದೆನು. ಅಮ್ಜದ್ ಖಾನ್ ಎಂಬುವವರು ಬಾಲಾಜಿ ಎಲೆಕ್ಟ್ರಾನಿಕ್ಸ್ ನಲ್ಲಿ ಟಿ.ವಿ.ಯನ್ನು ಖರೀದಿ ಮಾಡಿದ್ದರು. ಸದರಿಯವರು ಪ್ರತೀ ತಿಂಗಳು ಕಂತನ್ನು ಕಟ್ಟುತ್ತಿದ್ದರು. ದಿನಾಂಕ 22.09.2021 ರಂದು ತಿಂಗಳಿನ ಕಂತನ್ನು ಕಟ್ಟಿದ್ದಿರಲಿಲ್ಲ. ಕಂತಿನ due date ದಿನಾಂಕ 10 ಇರುತ್ತದೆ. ಸದರಿ ದಿನಾಂಕ ಮುಗಿದ ನಂತರ ನಾವು ದಿನಾಲೂ ಅವರ ಮನೆಗೆ ಹೋದಾಗ ಅವರು ಇರುತ್ತಿದ್ದಿರಲಿಲ್ಲ. ದಿನಾಂಕ 22 ರಂದು ನಾನು ಚಾಸಾ 2 ರವರ ಜೊತೆ ಕಲೆಕ್ಷನ್ ಗೆ ಸಂಜೆ 5.00 ಗಂಟೆಗೆ ಹಳೆಮಸೀದಿ ಹತ್ತಿರ ಇರುವ ಜಹರಾ ಖಾನ್ ರವರ ಮನೆಗೆ ಹೋಗಿರುತ್ತೇವೆ. ಮನೆಗೆ ಹೋಗಿ ಕಲೆಕ್ಷನ್ ಅಮೌಂಟ್ ಕೇಳಿದಾಗ ಜಹರಾ ಖಾನ್ ರವರ ಮನಯಲ್ಲಿ ರೋಷನ್ ಎಂಬುವವರು ನಮಗೆ ಅವಾಚ್ಯ ಶಬ್ದಗಳಿಂದ ಬೈಯ್ದು ಇಟ್ಟಿಗೆಕಲ್ಲಿನಿಂದ ನನಗೆ ಮೊದಲು ನನ್ನ ಮುಖಕ್ಕೆ ಹೊಡೆದಿರುತ್ತಾರೆ. ನನ್ನ ಕತ್ತನ್ನು

ಹಿಡಿದುಕೊಂಡು ಮೋರಿಗೆ ತಳ್ಳಿರುತ್ತಾರೆ. ನಾನು ಕೆಳಗಡೆ ಇದ್ದಾಗ ನನ್ನ ಎದೆಮೇಲೆ ಕಾಲನ್ನು ಇಟ್ಟಿದ್ದರು ಆಗ ನನ್ನ ಎದೆ ಸ್ವಲ್ಪ ನೋವಾಗಿರುತ್ತದೆ. ಮತ್ತೆ ಕಲೆಕ್ಷನ್ ಕೇಳಲು ಬಂದಾಗ ಸರಿ ಇರುವುದಿಲ್ಲ ಇನ್ನೂ ಜಾಸ್ತಿ ಮಾಡುತ್ತೇವೆ ಎಂದು ಹೇಳಿದರು. ನನ್ನ ಮುಖಕ್ಕೆ ರಕ್ತ ಗಾಯ ಆಗಿದ್ದರಿಂದ ನನ್ನ ಜೊತೆಯಲ್ಲಿ ಇದ್ದ ಚಾಸಾ 2 ರವರು ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತಾರೆ. ನಂತರ ಆಸ್ಪತ್ರೆಯಿಂದ ನಾವು ಪೋಲಿಸ್ ಠಾಣೆಗೆ ಹೋಗಿ ದೂರನ್ನು ಕೊಟ್ಟಿರುತ್ತೇವೆ. ಈಗ ಸಾಕ್ಷಿಗೆ ದೂರನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸದರಿ ದೂರನ್ನು ನಿಪಿ-1 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ದೂರನ್ನು ಕೊಟ್ಟ ನಂತರ ದಿನಾಂಕ 23.09.2021 ರಂದು ಮಹಜರ್ ಜರುಗಿಸಲು ಅವರ ಮನೆಯ ಹತ್ತಿರ ಬೆಳಿಗ್ಗೆ 10.30 ಗಂಟೆಗೆ ಕರೆದುಕೊಂಡು ಹೋಗಿದ್ದರು. ನಾನು ಜಾಗವನ್ನು ಹಾಗು ಕಲ್ಲನ್ನು ತೋರಿಸಿರುತ್ತೇನೆ ಹಾಗೂ ಸದರಿ ಕಲ್ಲನ್ನು ಗುರುತಿಸಿ ಪೋಲಿಸರು ತೆಗೆದುಕೊಂಡಿರುತ್ತಾರೆ. ಈಗ ಸಾಕ್ಷಿಗೆ ಕೃತ್ಯಸ್ಥಳ ಪಂಚನಾಮೆಯನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸದರಿ ಪಂಚನಾಮೆಯನ್ನು ನಿಪಿ-2 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸದರಿ ಕಲ್ಲನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇ:ನೆ. ಈಗ ಸಾಕ್ಷಿಯು ನಾಯಾಲಯದಲ್ಲಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಈ ಹಂತದಲ್ಲಿ ಮಾನ್ಯ ಸಹಾಯಕ ಅಭಿಯೋಜಕರು ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಿ ಮುಂದೂಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ.**
**ಮಾಗಡಿ.**